ಕರೆಯೋಲೆ ಕಳಿಹಿಸಿದೆ. ಕೆಲವು ಶಾಸಕರು ಮತ್ತು ಪ್ರಮುಖರು ಸಮ್ಮೇಳನದ ಯಶಸ್ಸಿಗೆ ಶುಭಕೋರಿ ಪತ್ರಗಳನ್ನೂ ಬರೆದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರದಿಂದ ಬರುತ್ತಿದ್ದ 30ಲಕ್ಷ ರೂ. ಅನುದಾನವನ್ನು 6ಕೋಟಿ ರೂ.ಗಳಿಗೆ ಹೆಚ್ಚಿಸಿರುವುದಾಗಿ ಶ್ರೀ ಜೀವರಾಜ್ ಆಳ್ವ ಅವರು ತಿಳಿಸಿದರೆಂದು ವರದಿಯಾಗಿದೆ. ಪರಿಷತ್ತಿಗೆ 30 ಲಕ್ಷ ರೂ. ಸಹಾಯ ಧನ ಯಾವ ವರ್ಷವೂ ದೊರಕಿಲ್ಲ; 30 ಲಕ್ಷ ರೂ.ಗಳೇ ದೊರಕದ ಮೇಲೆ 6 ಕೋಟಿ ರೂ.ಗಳ ಮಾತಂತೂ ದೂರವೇ ಉಳಿಯುತ್ತದೆ.

ನಾಡಿನ ಮೂಲೆ ಮೂಲೆಗೂ ಕನ್ನಡದ ವಾತಾವರಣವನ್ನು ಮೂಡಿಸಲು ಅಹರ್ನಿಶಿ ಶ್ರಮಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ಜಿಲ್ಲಾ ಮತ್ತು ತಾಲ್ಲೂಕು ಹಂತಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಸುತ್ತಿದೆ. ಈ ಎಲ್ಲ ಸಮ್ಮೇಳನಗಳಲ್ಲಿ ಆಯಾ ಭಾಗದ ಶಾಸಕರು ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ಪಾಲುಗೊಳ್ಳುತ್ತಿದ್ದಾರೆ. ಅನೇಕ ಕಡೆ ಸ್ಥಳೀಯ ಶಾಸಕರೇ ಸ್ವಾಗತ ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ. ಇದನ್ನು ಗಮನಿಸಿದಾಗ ಪರಿಷತ್ತಿನಿಂದ ಶಾಸಕರುಗಳಿಗೆ, ಅವರ ಸ್ಥಾನಮಾನಕ್ಕೆ ಧಕ್ಕೆ ತರುವಂತಹ ಕೆಲಸ ಎಲ್ಲೂ ನಡೆದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಏನೇ ಇರಲಿ, ಈ ಆಕಸ್ಮಿಕ ಪ್ರಸಂಗಕ್ಕಾಗಿ ನಾನು ಮತ್ತೊಮ್ಮೆ ವಿಷಾದ ವ್ಯಕ್ತಪಡಿಸುತ್ತೇನೆ. ಮಾನ್ಯ ಶಾಸಕರಲ್ಲಿ ಕ್ಷಮೆ ಕೋರುತ್ತೇನೆ.

ಈ ವಿಷಯವನ್ನು ಇಷ್ಟಕ್ಕೆ ಬಿಟ್ಟು ಪರಸ್ಪರ ಸೌಹಾರ್ದದ ವಾತಾವರಣವನ್ನು ಮೂಡಿಸೋಣ.

ಇಂತು ಪ್ರಣಾಮಗಳು

ಗೊ.ರು. ಚನ್ನಬಸಪ್ಪ
ಅಧ್ಯಕ್ಷ

ಶ್ರೀ ಸಿ. ಬೈರೇಗೌಡ : ಮಾನ್ಯ ಸಭಾಧ್ಯಕ್ಷರೇ, ನಿಯಮ 68 ರ ಪ್ರಕಾರ ಎನ್.ಜಿ.ಇ.ಎಫ್. ಕಾರ್ಖಾನೆ ಬಗ್ಗೆ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದನ್ನು ಮೊದಲು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

1) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ಮುಳುಗಡೆಯಾದ ಜಮೀನಿನಿಂದ ಸಾವಿರಾರು ಕುಟುಂಬಗಳಿಗೆ ಅನ್ಯಾಯ.

ಅಧ್ಯಕ್ಷರು : ಪಟ್ಟಣಶೆಟ್ಟಿಯವರೇ, ನೀವು ಎರಡು ನಿಮಿಷಗಳಲ್ಲಿ ಕೇಳಿ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಿಲಗುಂದ ಸ್ವಾಮಿಗಳು ಯು.ಕೆ.ಪಿ.ಯಲ್ಲಿ ಆದ ನೇಮಕಾತಿ ಬಗ್ಗೆ ಸುಮಾರು ಹದಿನೈದು ದಿನಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಮೂರು-ನಾಲ್ಕು ದಿವಸಗಳಿಂದ ಅವರು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಯು.ಕೆ.ಪಿ.ಯಲ್ಲಿ ಮುಳುಗಡೆಯಾದ ಜಾ[illegible] ಜಮೀನು ವಿಚಾರವಾಗಿ ಹೀರೆಗುಡ್ಡ [illegible] ಮೂರು-ನಾಲ್ಕು [illegible]

ಇದರಿಂದ ಸುಮಾರು 36 ಸಾವಿರ ಕುಟುಂಬಗಳಿಗೆ ಅನ್ಯಾಯವಾಗಿದೆ. ಮುಖ್ಯವಾಗಿ ಅಲ್ಲಿಯ ಕುಟುಂಬಕ್ಕೆ ಆದ್ಯತೆಯನ್ನು ಕೊಡಬೇಕಾಗಿತ್ತು, ಆದರೆ ಸರ್ಕಾರ ಅದರಲ್ಲಿ ಕೆಲವೊಂದು ನ್ಯೂನತೆಗಳನ್ನು ಮಾಡಿ ನೇಮಕಾತಿಯನ್ನು ಮಾಡಿದೆ. ಅದನ್ನು ಪ್ರತಿಭಟಿಸಿ ನಿಲಗುಂಡ ಸ್ವಾಮಿಗಳು ಮತ್ತು ಆ ಜಿಲ್ಲೆಯ ಇಂಜಿನಿಯರುಗಳು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಸರ್ಕಾರ ಇದುವರೆಗೂ ಕನಿಕರ ದೃಷ್ಟಿಯಿಂದ ಅವರ ಕಡೆಗೆ ಹೋಗಿ ನೋಡಿಲ್ಲ. ಆದ್ದರಿಂದ ಸರ್ಕಾರ ಅವರ ಕಡೆಗೆ ಹೋಗಿ ವಿಚಾರ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಉಪಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

2) **ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಇಂಜಿನಿಯರುಗಳ ನೇಮಕಾತಿ.**

+ ಶ್ರೀ ಹೆಚ್. ವೈ. ಮೇಟಿ : ಮಾನ್ಯ ಅಧ್ಯಕ್ಷರೇ, ಅಪ್ಪರ್ ಕೃಷ್ಣಾ ಯೋಜನೆಯಲ್ಲಿ ಈ ಇಂಜಿನಿಯರುಗಳ ನೇಮಕಾತಿಯಲ್ಲಿ ಮುಳುಗಡೆಯಾದ ಪ್ರದೇಶದವರನ್ನು ಹತ್ತು ಪರ್ಸೆಂಟ್ ತೆಗೆದುಕೊಳ್ಳಬೇಕೆಂದು ಸರ್ಕಾರ ಸುತ್ತೋಲೆಯನ್ನು ಹೊರಡಿಸಿತ್ತು. ಆದರೆ ಇದರಲ್ಲಿ ಅನ್ಯಾಯವಾಗಿದೆ. ಅದು ಹೇಗೆ ಎಂದರೆ ಜನರಲ್ ಮೆರಿಟ್ನಲ್ಲಿ ಆಯ್ಕೆಯಾದ ವ್ಯಕ್ತಿಗಳನ್ನು ಮುಳುಗಡೆಯಾದವರಲ್ಲಿ ಸೇರಿಸಿ ಅಲ್ಲಿಯ ಜನರಿಗೆ ಅನ್ಯಾಯವಾಗಿದೆ. ಈ ಎರಡೂ ಅಣೆಕಟ್ಟಿನಲ್ಲಿ ಹೆಚ್ಚು ಭಾಗ ಮುಳುಗಡೆಯಾಗಿರುವುದು ಬಿಜಾಪುರ ಜಿಲ್ಲೆಗೆ ಸೇರಿದ್ದು, ಇಲ್ಲಿಯವರಿಗೆ ಹೆಚ್ಚಿಗೆ ಸ್ಥಾನ ಕೊಡಬೇಕೆಂದು ನಾವು ಕೇಳಿದ್ದವು. ಆದರೆ ಹತ್ತು ಪರ್ಸೆಂಟ್ನಲ್ಲಿ ಸಹಿತ, ಹೀಗೆ ನಲವತ್ತು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾದರೆ ಅಲ್ಲಿ ೧೮-೨೦ ಜನ ಜನರಲ್ ಮೆರಿಟ್ನಲ್ಲಿ ಅವರು ಆಯ್ಕೆಯಾಗೇ ಆಗುತ್ತಿದ್ದರು. ಅಂತಹವರನ್ನೂ ಸಹಿತ ಮುಳುಗಡೆಯಲ್ಲಿ ಸೇರಿಸಿರುವುದರಿಂದ ಆ ಜಿಲ್ಲೆಗೆ ಅನ್ಯಾಯವಾಗಿದೆ. ಹಾಗೂ ವಯೋಮಿತಿಯಲ್ಲಿ ೧೯೮೮ ರಿಂದ ೯೩ ರವರೆಗೆ ಏನೋಂದು ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ, ಅಂತಹವರಿಗೆ ಈ ಅವಧಿಯಲ್ಲಿ ಕೇವಲ ೨೪೪ ಹುದ್ದೆಗಳನ್ನು ಮಾತ್ರ ನೀಡಿದ್ದಾರೆ. ಅದರ ಹಿಂದೆ ಏನು ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರುಗಳನ್ನು ದಾಖಲಿಸಿದ್ದರು ಅಂತಹವರಿಗೆ ಕೇವಲ ೪೨ ಹುದ್ದೆಗಳನ್ನು ನೀಡಿದ್ದಾರೆ. ಆದ್ದರಿಂದ ಮೆರಿಟ್ನಲ್ಲಿಯೂ ಅನ್ಯಾಯವಾಗಿದೆ. ಹಾಗೂ ಇದು ಬೇರೆ ಬೇರೆ ಜಿಲ್ಲೆಗಳಿಗೆ ಸೇರಿದ ಅಭ್ಯರ್ಥಿಗಳ ಹೆಸರುಗಳು ಇದ್ದು, ಅಲ್ಲಿ ತಂದು ಸೇರಿಸಿ, ಕೆಲವು ದಾಖಲೆಗಳಲ್ಲೂ ಕೂಡ ಅನ್ಯಾಯವಾಗಿದೆ. ಅದರ ಸಲುವಾಗಿ ನಮ್ಮ ಜಿಲ್ಲೆಯ ಕೆಲವು ಇಂಜಿನಿಯರಿಂಗ್ ಪದವೀಧರರು ಅವರ ವಯಸ್ಸು ೩೬-೩೭ ಆಗಿದ್ದು ಮುಂದೆ ಅವರ ಜೀವನ ಹಾಳಾಗಿ ಹೋಗುತ್ತದೆ. ಆದ್ದರಿಂದ ಅವರಿಗೂ ಸಹ ಸ್ಥಾನಮಾನ ಕೊಡುವ ಸಲುವಾಗಿ ಅವರು ಈ ಹತ್ತು ಹನ್ನೆರಡು ದಿವಸಗಳಿಂದ ಸರದಿ ಉಪವಾಸ ಸತ್ಯಾಗ್ರಹ ಮಾಡಿ ಈಗ ಮೂರು ದಿವಸಗಳಿಂದ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆ.

ಅದಕ್ಕಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು, ಇದರ ಸಲುವಾಗಿ ಹೆಚ್ಚು ಕಾಳಜಿ ವಹಿಸಿ, ಅವರಿಗೆ ಯೋಗ್ಯವಾದ, ಅರ್ಹತೆಯ ಆಧಾರದ ಮೇಲೆ, ಕೆಲವೊಂದು ಅನುಕೂಲಗಳನ್ನು ಮಾಡಿ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಈಗ ಅವರು ಅಮರಣಾಂತ ಸತ್ಯಾಗ್ರಹ ಕುಳಿತಿದ್ದಾರೆ, ಅವರನ್ನು ಎಬ್ಬಿಸುವ ಸಲುವಾಗಿ ಸರ್ಕಾರ ಏನಾದರೂ ಕ್ರಮ ಕೈಗೊಳ್ಳಲಿ ಎಂದು ತಿಳಿದುಕೊಂಡು ತಮ್ಮ ಮುಖಾಂತರ, ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಆರ್.ಎಂ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ೪೪೦ ಇಂಜಿನಿಯರುಗಳು ನೇಮಕಾತಿಯಾಗಿದೆ. ಅದರಲ್ಲಿ ೧೨೦ ಅಸಿಸ್ಟೆಂಟ್ ಇಂಜಿನಿಯರ್ಸ್, 120 ಜೂನಿಯರ್ ಇಂಜಿನಿಯರ್ಸ್. ಆದರೆ, ಇದರಲ್ಲಿ